## 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಜೆ. ಎಂ. ಎಫ್.ಸಿ. ನ್ಯಾಯಾಲಯ, ಬೇಲೂರು

**ಸಿ.ಸಿ. ನಂ. 43/2017**

**ಸಾಕ್ಷಿಃ ಸಿ.ಡಬ್ಲ್ಯೂಃ 5 ಪಿ.ಡಬ್ಲ್ಯೂಃ 5**

ಸಾಕ್ಷಿಯ ಹೆಸರು : ನಿಂಗರಾಜು
ತಂದೆ ಹೆಸರು : ಜವರಯ್ಯ
ವಯಸ್ಸು : 54 ವರ್ಷ
ಉದ್ಯೋಗ : ವ್ಯವಸಾಯ
ವಾಸಸ್ಥಳ : ಹಾಡ್ಲಿಗೆರೆ ಪುರ

**ಸತ್ಯ ಪ್ರತಿಜ್ಞೆಯ ಮೇರೆಗೆ, ತಾ: 06-07-2026**

**ಮುಖ್ಯ ವಿಚಾರಣೆಃ** ಎಪಿಪಿಯವರಿಂದ,

ಆರೋಪಿತರು ಗೊತ್ತು. ಚಾಸಾ-1 ರಿಂದ 4 ರವರು ಗೊತ್ತು. ಅವರು ನಮ್ಮ ಊರಿನವರು.

ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ಘಟನೆಯನ್ನು ಪ್ರತ್ಯಕ್ಷವಾಗಿ ನೋಡಿರುತ್ತೇನೆ ಎಂದು ಪೋಲೀಸರ ಮುಂದೆ ಹೇಳಿಕೆ ನೀಡಿರುವುದಿಲ್ಲ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಮುಮಾ-1 ಅನ್ನು ನೋಡಿ ಗುರುತಿಸಿರುವುದಿಲ್ಲ.

**(ಈ ಹಂತದಲ್ಲಿ ಎಪಿಪಿಯವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ** ಎಪಿಪಿಯವರಿಂದಃ

ದಿಃ31-12-2016 ರಂದು ರಾತ್ರಿ 8.00 ಗಂಟೆ ಸಮಯದಲ್ಲಿ ನಾನು ಮನೆಯಲ್ಲಿ ಇದ್ದಾಗ ಚಾಸಾ-2 ಮತ್ತು 1ನೇ ಆರೋಪಿತರ ಮನೆಯ ಹಿಂಭಾಗದಲ್ಲಿ ಕೂಗಾಡುತ್ತಿದ್ದ ಶಬ್ದ ಕೇಳಿ ನಾನು ಹೋಗಿ ನೋಡಿದಾಗ ಚಾಸಾ-1 ರವರು ಮನೆಯ ಗೋಡೆಗೆ ನೀರು ಹಾಕುತ್ತಿದ್ದು, 1ಮತ್ತು 2ನೇ ಆರೋಪಿತರು ಜಗಳ ತೆಗೆದು 1ನೇ ಆರೋಪಿ ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದರು ಎಂದರೆ ಸರಿಯಲ್ಲ. ಚಾಸಾ-2 ರವರು ಮನೆಯಿಂದ ಹೊರಗೆ ಬಂದಾಗ 2ನೇ ಆರೋಪಿ ಚಾಸಾ-1 ರವರನ್ನು ತಬ್ಬಿ ಹಿಡಿದುಕೊಂಡು 1ನೇ ಆರೋಪಿ ತನ್ನ ಕೈಯಲ್ಲಿದ್ದ ದೊಣ್ಣೆಯಿಂದ ಚಾಸಾ-1 ರವರ

ಮುಖಕ್ಕೆ ಹೊಡೆದು ನೋವುಂಟು ಮಾಡಿದರು ಎಂದರೆ ಸರಿಯಲ್ಲ. ಚಾಸಾ-2 ರವರು ಜಗಳ ಬಿಡಿಸಲು ಬಂದಾಗ 3ನೇ ಆರೋಪಿ ಚಾಸಾ-2 ರವರನ್ನು ತಬ್ಬಿ ಹಿಡಿದುಕೊಂಡು 4ನೇ ಆರೋಪಿ ಕೈಗಳಿಂದ ಚಾಸಾ-2 ರವರ ಮೈಕೈಗೆ ಹೊಡೆದು ನೋವುಂಟು ಮಾಡಿದರು ಎಂದರೆ ಸರಿಯಲ್ಲ. 4ನೇ ಆರೋಪಿ 1 ರಿಂದ 3ನೇ ಆರೋಪಿತರಿಗೆ ಹಲ್ಲೆ ಮಾಡುವಂತೆ ಕುಮ್ಮಕ್ಕು ನೀಡಿದರು ಎಂದರೆ ಸರಿಯಲ್ಲ. ಅಲ್ಲಿಯೇ ಇದ್ದ ನಾನು ಚಾಸಾ-3 ಮತ್ತು 4 ರವರು ಜಗಳ ಬಿಡಿಸಿದೆವು ಎಂದರೆ ಸರಿಯಲ್ಲ. ಏಟಾಗಿದ್ದ ಚಾಸಾ-1 ಮತ್ತು 2 ರವರನ್ನು ಬೇಲೂರಿನ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಿಸಿದೆವು ಎಂದರೆ ಸರಿಯಲ್ಲ.

ದಿಃ 02-01-2017 ರಂದು ಪೋಲೀಸರ ಮುಂದೆ ಹೇಳಿಕೆ ನೀಡಿ ನಾನು ನನ್ನ ಹೇಳಿಕೆಯಲ್ಲಿ '' ನಾನು ಮೇಲ್ಕಂಡ ವಿಳಾಸದಲ್ಲಿ -----------ಪ್ರತ್ಯಕ್ಷವಾಗಿ ನೋಡಿರುತ್ತೇನೆ '' ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ತನ್ನ ಹೇಳಿಕೆಯನ್ನು ನಿರಾಕರಿಸಿದ್ದರಿಂದ ಸಾಕ್ಷಿಯ ಹೇಳಿಕೆ ಭಾಗವನ್ನು ನಿಪಿ-3 ಎಂದು ಗುರುತಿಸಲಾಯಿತು.

ಘಟನೆಯನ್ನು ಪ್ರತ್ಯಕ್ಷವಾಗಿ ನೋಡಿ, ನಿಪಿ-3 ರಂತೆ ಹೇಳಿಕೆ ನೀಡಿದ್ದರೂ ಸಹ ಆರೋಪಿತರು ನನಗೆ ಪರಿಚಯ ಇರುವ ಕಾರಣ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

ಮರುವಿಚಾರಣೆ ಇಲ್ಲ.

(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾ.ದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ. ಸರಿ ಅದೆ.**

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ**
**ಜೆ.ಎಂ.ಎಫ್.ಸಿ. ನ್ಯಾಯಾಲಯ ಬೇಲೂರು**